ಓಎಸ್ ನಂಃ 42/17 DW 2

ಸಾಕ್ಷಿಯನ್ನು ದಿನಾಂಕ 28.08.2019 ರಂದು ಪುನಃ ಕರೆಸಿ ಪಮಾಣ ವಚನ ಬೋಧಿಸಲಾಯಿತು.

ಪಾಟಿ ಸಾವಾಲು ಶ್ರೀ ಎನ್ ಜಿ ಎಸ್ ವಕೀಲ ರಿಂದ

ಟಿಎಸ್ ಗೋವಿಂದ ರಾಜನ್ ರವರ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಇವತ್ತಿನ ವರೆಗೂ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ . ದಾವೆದ ಅಸ್ತಿ ಗಳು ನನ್ನ ತಾಯಿ ಮತ್ತು ಶ್ರೀನಿವಾಸ ರಂಗನ್ ರವರ ಸ್ವಯಾರ್ಜಿತ ಅಸ್ತಿಗಳು ಎಂದು ತೋರಿಸಲು ನಾಯಾಲಕ್ಕೆ ದಾಖಲಾತಿಗಳನ್ನು ಕೊಟ್ಟಿದ್ದೇನೆ. ದಾವೆದ ಆಸ್ತಿ ಶ್ರೀನಿವಾಸ ರಂಗನ್ ಮತ್ತು ಪಟ್ಟಾಭಿರಾಮನ್ ರವರ ಸ್ವಯಾರ್ಜಿತ ಆಸ್ತಿಯಲ್ಲ ಆದ್ದರಿಂದ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. Item no10 ಮತ್ತು 11 ಆಸ್ತಿಗಳು ಸ್ವಯಾರ್ಜಿ ಆಸ್ತಿ ಎಂದು ತೋರಿಸಲು ನಿಶಾನೆ ಡಿ 1 ಮತು 2 ಕೊಟ್ಟಿದ್ದೆನೆ. ನಿಶಾನ ಡಿ 1 ಮತ್ತು 2 ದಾಖಲಾತಿಯನ್ನು ಬಿಟ್ಟು ಬೇರೇನೂ ಕೊಟ್ಟಿಲ್ಲ ಎಂದರೆ ಸರಿ . Item no10 ಮತ್ತು 11 ಆಸ್ತಿಯನ್ನು ಪಟ್ಟಾಬಿರಾಮನ್ ಮತ್ತು ಸುಲೋಚನ ಅವರ ಹೆಸರಿಗೆ ಖರೀದಿಸಿದ್ದೇವೆ ಎಂದರೆ ಸರಿ .ನನ್ನ ತಾಯಿಯ ದೊಡ್ಡಪ್ಪನ ಮಗ ಅಪ್ರತಮ್ ಐಯಂಗಾರ್ ಇದ್ದಾರೆ ಎಂದರೆ ಸರಿಯಲ್ಲ .ಸದರಿ ಯವರು ಗ್ರಾಮ ಲೆಕ್ಕಾಧಿಕಾರಿ ಎಂದರೆ ಸರಿಯಲ್ಲ . ಅಪ್ರಮಯಂಗಾರ್ ನನ್ನ ತಾಯಿಗೆ ತಂದೆ ಆಗಬೇಕು ಎಂದರೆ ಸರಿ . ಅಪ್ರಮಯಂಗಾರ್ ಅವರ ಅಳಿಯ ರಂಗಸ್ವಾಮಿ ಎಂದರೆ ಸರಿಯಲ್ಲ . ಶೇಶಾದ್ರಿ ಅಯಂಗಾರ್ ರವರ ಅಳಿಯ ರಂಗಸ್ವಮಿ ಎಂದು ಇದ್ದಾರೆ ಎಂದರೆ ಸರಿ . ಅವರು ಗ್ರಾಮ ಲೆಕ್ಕಾ ಧಿಕಾರಿಯಾಗಿದ್ದರು ಎಂದರೆ ಸರಿ . ನನ್ನ ಮುತ್ತಾತಾ ಸತ್ತ ನಂತರ ಸದರಿ ರಂಗಸ್ವಾಮಿ ಯವರು ಪಟ್ಟಾಬಿರಾಮ್‌ನ್ ಮತ್ತು ಶ್ರೀನಿವಾಸ ರಂಗನ್ ರವರ ಹೆಸರಿಗೆ ಖಾತೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ . 24.04.2015 ರಂದು ಶ್ರೀಮತಿ ಶುಭವತಿ ಮತ್ತು ಸುಗುಣ ರವರು ನನ್ನ ತಾಯಿಗೆ ಮತ್ತು 3 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ . ಸಾಕ್ಷಿ ಗೆ ಒಂದು ದಾಖಲಾತಿ ತೋರಿಸಲಾಗಿ ಅದು ಖುಲಾಸೆ ಪತ್ರ ಎಂದು ಒಪ್ಪಿಕೊಂಡಿದ್ದರಿಂದ ನಿಶಾನೆ ಪಿ 33 ಎಂದು ಗುರುತಿಸಲಾಯಿತು. ನಿಶಾನೆ ಪಿ 33 ರನ್ನು ಬರೆದು ಕೊಡುವಾಗ Item no11 ಆಸ್ತಿ ಅಸ್ತಿತ್ವದಲ್ಲಿರಲಿಲ್ಲ ಎಂದರೆ ಸರಿ . ಸದರಿ ಎಟಂ ನಂ 11 ಅನ್ನು ಮಾರಾಟ ಮಾಡಿದ್ದೆಂದರೆ ಸರಿ . ನಿಶಾನೆ ಪಿ 33 ನಾನು ಈ ಕೇಸಿಗೋಸ್ಕ ರ ಸೃಷ್ಟಿ ಸಿದ ದಾಖಲೆ ಎಂದರೆ ಸರಿಯಲ್ಲ . ಐಟಂ ನಂ 10 ಮತ್ತು 11 ರ ಕ್ರಯ ಪತ್ರ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ . ಐಟಂ ನಂ 10 ಮತ್ತು 11 ರಲ್ಲಿ ಆಸ್ತಿಗಳುಯಾವುದೇ ರೀತಿ ಕ್ರಯವಾಗಿಲ್ಲ ಅದರಲ್ಲಿರುವ consideration ಒಬ್ಬರಿಂದಒಬ್ಬರಿಗೆ ವರ್ಗಾ ವಣೆ ಯಾಗಿಲ್ಲ ಎಂದರೆ ಸರಿಯಲ್ಲ . ಆದ್ದರಿಂದ ಕ್ರಯಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ನಿಶಾನೆ ಪಿ 33 ರಲ್ಲವಿಷಯನು್ನ ತಿಳಿದುಕೊಂಡಿದ್ದೇನೆ ಎಂದರೆ ಸರಿ . ಹಕ್ಕು ಖುಲಾಸೆ ಪತ್ರದಲ್ಲಿ ನಾನು ಸಂಪಾದನೆ ಮಾಡಿ ಅವರ ಹೆಸರಿಗೆ ಬರೆಸಿದ್ದೇನೆಂದು ಹೇಳಲು ತೊಂದರೆ ಇರಲಿಲ್ಲ ಎಂದರೆ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ . ನನ್ನ ಹೆಸರಿಗೆ ಖರೀದಿಸಲು ತೊಂದರೆಇತ್ತ ಎಂದರೆ ನಮ್ಮ ಮನೆಯಲ್ಲಿ ಹಿರಿಯರಿದ್ದರಿಂದ ಅವರ ಹೆಸರಿಗೆ ಖರೀದಿಸಿದ್ದೇನೆ ಎನ್ನುತ್ತಾರೆ . ನಾನು ಈ ಕೇಸಿಗೋಸ್ಕರ ಅದನ್ನು ಸೃಷ್ಟಿಸಿದ್ದೇನ ಎಂದರೆ ಸರಿಯಲ್ಲ. ಐಟಂ ನಂ 11 ಆಸ್ತಿಯನ್ನು ಈ ದಾವೆ ಹಾಕಿದಮೇಲೆ ಮಾರಾಟ ಮಾಡಿದ್ದೇನೆ ಎಂದರೆ ಸರಿ .

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ

ಗುಂಡ್ಲುಪೇಟೆ.

DW-1

ಸಾಕ್ಷಿಯನ್ನು ದಿನಾಂಕ 23.08.2019 ರಂದು ಪುನಃ ಕರೆಸಿ ಪಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹೆಚ್ ಎಸ್ ಪಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಶಪಥ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತದೆ. ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

ಜಿನತ್ Text tiles ರವರು ಕೊಟ್ಟಂತಹ ದೃಢೀಕರಣ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಡಿ-1 ಎಂದೂ, ವೇತನ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಸಮಯ ಕೋರಿದ್ದರ ಮೇರೆಗೆ ಮುಂದೂಡಲಾಯಿತು.

ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತ್ತು

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಗುಂಡ್ಲುಪೇಟೆ.